## ಕಳೆದ ಸಂಚಿಕೆಯಲ್ಲಿ



ಹೆಣ್ಣಿನ ಬದುಕಿನಲ್ಲಿ ನಡೆಯುವ ಘಟನೆಗಳು, ಆಕೆಯ ಮಾನಸಿಕ ತುಮುಲ, ಪುರುಷರು ಮಹಿಳೆಯರ ಮೇಲೆ ತೋರಿಸುವ ದರ್ಪ, ಧೋರಣೆಯನ್ನು ಕಡೆಗಣಿಸುವ ಕಥಾನಾಯಕಿ ಸುಗಂಧಾ, ಹೆಣ್ಣು ಕೇವಲ ದೇಹವೋ ಅಥವಾ ದೇಹದಿಂದ ಆಚೆಗೂ ಬಹಳಷ್ಟಿರುವವಳೋ ಎಂಬ ಮಾನಸಿಕ ತೊಳಲಾಟದಲ್ಲಿರುತ್ತಾಳೆ. ಈಕೆಯ ಜೀವನದಲ್ಲಿ ಪ್ರವೇಶಿಸಿದ ರಿತಿಕ್ ಮತ್ತು ಸುಗಂಧಾ ಮಧ್ಯೆ ವಿವಾದ ಮಹಿಳೆ–ಪುರುಷರ ಸಾಮಾಜಿಕ ಅಸ್ತಿತ್ವದ ಬಗೆ ಹಲವು ರೀತಿಯಲ್ಲಿ ಅನಾವರಣಗೊಳ್ಳುತ್ತದೆ. ಬರವಣಿಗೆ ಹವ್ಯಾಸವಿರುವ ನಾಯಕಿಗೆ ಪತ್ರಿಕಾ ಕಚೇರಿಯಲ್ಲಿ ಕೆಲಸ ಮಾಡುವ ಮೃದುಲ್ ಪರಿಚಯವಾಗುತ್ತಾನೆ. ಪ್ಯಾರಿಸ್‌ನಲ್ಲಿ ಹುಟ್ಟಿದ ಫ್ರೆಂಚ್ ಲೇಖಕಿ ಸಿಮೋನ್ ಬಗ್ಗೆ, ಆಕೆಯ 'ಸೆಕೆಂಡ್ ಸೆಕ್ಸ್' ಪುಸ್ತಕದ ಬಗ್ಗೆ ಮಾಹಿತಿಯನ್ನು ನೀಡುತ್ತಾನೆ. ಮೃದುಲ್ ವ್ಯಕ್ತಿತ್ವ ಇಷ್ಟವಾಗುವ ಸುಗಂಧಾಗೆ ಕಚೇರಿಯಿಂದ ಮನೆಗೆ ಹೋಗುವ ಮಳೆ ಬರುವ ಸಂದರ್ಭದಲ್ಲಿ ತನ್ನ ಬೈಕ್‌ನಲ್ಲೇ ಡ್ರಾಪ್ ಕೊಡುತ್ತಾನೆ.

'ಉದಾಹರಣೆಗೆ?'

'ಉದಾಹರಣೆಗೆ, ನೀವು ಯಾವ ಸೆಕ್ಷನ್‌ನಲ್ಲಿ ಕೆಲಸ ಮಾಡ್ತೀರ, ಎಲ್ಲಿದ್ದೀರ, ಮತ್ತೆ...'

'ಮತ್ತೆ?'

'ಮತ್ತೇನಿಲ್ಲ, ಇಷ್ಟೇ...' ರಿತಿಕ್ ಹಿಂಜರಿದಿದ್ದ.

'ಹೇಳ್ತಿದ್ದೀರಲ್ಲ, ಎಲ್ಲಾ ಹೇಳಿ ಬಿಡಿ' ನಾನು ಆಗ್ರಹಿಸಿದೆ.

'ನೀವು ಅನ್ಯಥಾ ಭಾವಿಸಬೇಡಿ, ಆದರೆ ನೀವು ಮದುವೆಯಾಗಿಲ್ಲ ಅನ್ನೋದು ಗೊತ್ತು'. ರಿತಿಕ್ ತಡವರಿಸಿದ್ದ.

'ಏಕೆ ವಿವಾಹಿತಳಲ್ಲ, ಇದು ನಿಮಗೆ ಗೊತ್ತ?'

'ಇಲ್ಲ, ಖಂಡಿತ ಅಲ್ಲ!' ರಿತಿಕ್ ಆಶ್ಚರ್ಯಗೊಂಡಿದ್ದ.

'ಥ್ಯಾಂಕ್ಸ್ ಗಾಡ್! ನನ್ನ ಬಗ್ಗೆ ಗೊತ್ತಿಲ್ಲದ ವಿಷಯವಂತೂ ಇದೆ'. ನಾನು ನಕ್ಕೆ. ಅವನೂ ನಕ್ಕಿದ್ದ.

'ನಿಮ್ಮ ಮಮ್ಮಿಡ್ಯಾಡಿ, ಬ್ರದರ್ಸ್‌ಸಿಸ್ಟರ್ಸ್ ಬಗ್ಗೆ ನನಗೆ ಗೊತ್ತಿಲ್ಲ'. ರಿತಿಕ್ ನಗುತ್ತಾ ಹೇಳಿದ್ದ.

'ಆರಾಮಾಗಿ ತಿಳ್ಕೊಳ್ಳಿ, ಈಗ ಕಟ್ಲೆಟ್ ತಿನ್ನಿ, ತಣ್ಣಗಾಗುತ್ತೆ.' ನಾನು ವಿಷಯವನ್ನು ಅಲ್ಲಿಗೇ ನಿಲ್ಲಿಸಿದ್ದೆ. ರಿತಿಕ್ ಸಹ ಮತ್ತೆ ಕೇಳಿರಲಿಲ್ಲ.

ನಮ್ಮ ಪರಿಚಯ ಔಪಚಾರಿಕತೆಯಿಂದ ಅನೌಪಚಾರಿಕತೆಯೆಡೆಗೆ ಸಾಗುತ್ತಿತ್ತು. ರಿತಿಕ್ ಟೂರ್ ಮೇಲೆ ಬೇರೆಬೇರೆ ನಗರಗಳಿಗೆ ಹೋಗಬೇಕಾಗುತ್ತಿತ್ತು. ನನಗೆ ಪ್ರವಾಸ ಸದಾ ಇಷ್ಟವಾಗಿತ್ತು. ನಾನು ನನ್ನ ಕಚೇರಿಯಿಂದ ರಜಾಗಳನ್ನು ಪಡೆದು ರಿತಿಕ್‌ನೊಂದಿಗೆ ಹೊರಗೆ ಹೋಗಲಾರಂಭಿಸಿದೆ. ಈ ಜೊತೆ ನಮ್ಮಿಬ್ಬರನ್ನು ಸಾಮೀಪ್ಯಕ್ಕೆ ತಂದಿತು. ಹಾಗಂತ ನಾನು, ನಮ್ಮ ಅಂತರಂಗದ ನಿಕಟತೆ ನಮ್ಮ ನಗರದಲ್ಲಿಯೇ ನೆಲೆಯೂರಿತ್ತು ಎಂಬುದನ್ನು ಮರೆತಿಲ್ಲ. ಅಂದು ಸಂಜೆ ನಾವಿಬ್ಬರು ಜೊತೆಯಲ್ಲಿ ಊಟ ಮಾಡಿದ್ದೆವು, ಊಟವನ್ನು ರಿತಿಕ್ ಹೋಟೆಲ್‌ನಿಂದ ಪಾರ್ಸಲ್ ತಂದಿದ್ದ. ತದನಂತರ ನಾವು ತುಂಬಾ ಹೊತ್ತು ದರ್ಶನ, ಧರ್ಮ ಮತ್ತು ರಾಜಕೀಯದ ಬಗ್ಗೆ ಹರಟಿದೆವು. ಅಂದು ಮೊದಲ ಬಾರಿಗೆ, ಕ್ರೀಡಾಪಟುವಿನಂತೆ ತೋರುತ್ತಿದ್ದ ರಿತಿಕ್‌ಗೆ ಜೀವನದ ಬಗ್ಗೆ ಆಳವಾದ ಅರಿವಿದೆ ಎಂಬುದನ್ನು ತಿಳಿದೆ. ಆದರೆ ಒಂದು ವಿಷಯದಲ್ಲಿ ನಮ್ಮ ಚರ್ಚೆ ಆಘಾತಕ್ಕೊಳಗಾಗಿತ್ತು, ಅದು ಮಹಿಳಾ ಸ್ವಾತಂತ್ರ್ಯದ ಬಗೆಗಿನ ಚರ್ಚೆಯಾಗಿತ್ತು.

'ಮಹಿಳೆ ಸದಾ ಎರಡನೆಯ ದರ್ಜೆಯವಳಲ್ಲ; ನೋಡ್ತಿರಿ, ಮುಂದೊಂದು ದಿನ ಅವಳಿಗೆ ಸೂಕ್ತ ರೀತಿಯ ಸಮಾನತೆ ಲಭಿಸುವುದು ನಿಶ್ಚಿತ' ಎಂದಿದ್ದೆ.

'ಸಂಭವವಿಲ್ಲ, ಕಡೇ ಪಕ್ಷ ನಮ್ಮ ದೇಶದಲ್ಲಂತೂ ಇಲ್ಲ'.

'ಇದೇನು ನೀವು ಹೇಳ್ತಿದ್ದೀರ?' ನಾನು ಆಶ್ಚರ್ಯದಿಂದ ಕೇಳಿದ್ದೆ.

'ನಿಜ ಹೇಳ್ತಿದ್ದೇನೆ. ನೀವಿಲ್ಲಿ, ಈ ನಗರದಲ್ಲಿ ಒಂಟಿಯಾಗಿದ್ದೀರ, ನೌಕರಿ ಮಾಡುತ್ತಿದ್ದೀರ, ಒಬ್ಬ ಪುರುಷನಂತೆ ಅಂದರೆ ಮಹಿಳೆಯಾಗಿ ಪುರುಷನಂತೆ ಒಬ್ಬ ಸೆಕ್ಸ್ ಪಾರ್ಟನರ್ ಇಟ್ಟುಕೊಂಡಿದ್ದೀರ ಎಂಬ ವಿಷಯದಲ್ಲಿ ಪರೀಕ್ಷಿಸುತ್ತಿದ್ದೀರ; ನಾನು ಏನು ಹೇಳ್ತಿದ್ದೇನೆಂದು ಅರ್ಥ ಮಾಡಿಕೊಳ್ತಿದ್ದೀರಲ್ಲ?' ರಿತಿಕ್ ಕಡ್ಡಿಮುರಿದಂತೆ ಹೇಳಿದ್ದ.

'ಬುಲ್‌ಶಿಟ್! ಹೌ ಡೇರ್ ಆರ್ ಯೂ! ನನ್ನ ಬಗ್ಗೆ ನಿಮಗಿಂಥ ನೀಚ ವಿಚಾರವಿದೆ ಎಂಬುದು ನನಗೆ ಗೊತ್ತಿರಲಿಲ್ಲ'. ನಾನು ಹುಚ್ಚಿಯಂತಾದೆ.

'ನಾವು ನಿಮ್ಮ ಬಗ್ಗೆ ಅಲ್ಲ, ಮಹಿಳಾಸ್ವಾತಂತ್ರ್ಯದ ಬಗ್ಗೆ ಚರ್ಚಿಸುತ್ತಿದ್ದೇವೆ.'

'ಏನಾಯ್ತು? ನೀವು ನನ್ನ ಉದಾಹರಣೆಯನ್ನೇ ಕೊಡ್ತಿದ್ದೀರ'.

'ನಾನು ಹೇಳಿದ್ದು ತಪ್ಪಾ?'

'ಸರಿ ಸಹ ಹೇಳಲಿಲ್ಲ'.

'ಹಾಗಾದ್ರೆ ಯಾವುದು ಸರಿ? ನಿಮ್ಮ ಜೀವನದಲ್ಲಿ ನನ್ನ ಸ್ಥಾನವೇನು?' ರಿತಿಕ್ ನನ್ನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿ ಕೇಳಿದ್ದ.

'ನೀವು ನನ್ನ ಸ್ನೇಹಿತರು'

'ಅಷ್ಟೇನಾ?'

'ಇಬ್ಬರು ಮಿತ್ರರ ನಡುವೆ ಸೆಕ್ಸ್‌ಗೇನು ಕೆಲಸ?'

'ಏನಾದ್ರು ನಿರ್ಬಂಧವಿದೆಯೇ?'

'ಇಲ್ವಲ್ಲ! ಆದರೂ...' ರಿತಿಕ್ ನನ್ನ ಗೇಲಿ ಮಾಡಲು ಹೊರಟಿದ್ದ; ಕಡೇ ಪಕ್ಷ ನನಗೆ ಹೀಗೆಯೇ ಅನ್ನಿಸಿತು.

'ನೀವು ನನಗೆ ಇಷ್ಟ, ಮುಂದುವರೆದು ಹೇಳಿದೆ. ಆದ್ರೆ ಇಷ್ಟವಾದ ಎಲ್ಲಾ ವ್ಯಕ್ತಿಗಳೊಂದಿಗೆ ಸೆಕ್ಸ್...'

'ಓಹ್, ಯೂ ಶಟಪ್! ನಾನು ನಿಮ್ಮನ್ನು ಪ್ರೀತಿಸುತ್ತೇನೆ', ನಾನು ರಿತಿಕ್‌ಗೆ ಹೇಳಿದ್ದೆ. ಇದಕ್ಕೂ ಮೊದಲು, ತುಂಬಾ ಕೋಮಲವಾಗಿ ಪ್ರೀತಿಯ ಉದ್ಘಾಟನೆಯನ್ನು ಮಾಡಲಾಗುತ್ತದೆ ಎಂದು ಮೊದಲು ಓದಿದ್ದೆ, ನೋಡಿದ್ದೆ, ಕೇಳಿದ್ದೆ. ಆದರೆ ನಾನು ನನ್ನ ಪ್ರೀತಿಯ ಉದ್ಘಾಟನೆಯನ್ನು ತುಂಬಾ ಸಿಟ್ಟಿನ ವಾತಾವರಣದಲ್ಲಿ, ತುಂಬಾ ದುಷ್ಟತನದಿಂದ ಮಾಡಿದ್ದೆ.

'ಈಗ ನೀವು ನನಗೆ, ನೀವು ನನ್ನನ್ನು ಮದುವೆಯಾಗಲು ಬಯಸುತ್ತೇನೆ, ಗೃಹಸ್ಥ ಜೀವನ ನಡೆಸುತ್ತೇನೆ, ಕೆಲವು ಮಕ್ಕಳನ್ನು ಹೆರಲು ಬಯಸುತ್ತೇನೆ ಎನ್ನುವಿರಿ'. ರಿತಿಕ್ ವ್ಯಂಗ್ಯವಾಗಿ ನಕ್ಕಿದ್ದ. ಆ ಕ್ಷಣವೇ ನಮ್ಮಿಬ್ಬರ ಸಂಬಂಧಗಳಿಗೆ ಪೂರ್ಣವಿರಾಮ ಬೀಳಬೇಕಿತ್ತು, ಆದರೆ ಹೀಗಾಗಲಿಲ್ಲ. ನಾನು ವಾಸ್ತವವಾಗಿ ರಿತಿಕ್‌ನನ್ನು ಪ್ರೀತಿಸಲು ಆರಂಭಿಸಿದ್ದೆ. ರಿತಿಕ್‌ನಿಂದ ಮಾನಸಿಕ ಆಸರೆಯನ್ನು ಪಡೆಯುತ್ತಿದ್ದೆ. ರಿತಿಕ್‌ನನ್ನು ಕಳೆದುಕೊಳ್ಳಲು ಬಯಸುತ್ತಿರಲಿಲ್ಲ. ಆ ಸಮಯದವರೆಗೆ ನನ್ನ ಉತ್ತರ ಒಂದು ವಿಧದಲ್ಲಿ ಡಿಪ್ಲೊಮೆಟಿಕ್ ಆಗಿತ್ತು. ಆ ಉತ್ತರ ಹೇಗಿತ್ತೆಂದರೆ, ಅದು ನನ್ನ ಜಂಭವನ್ನು ಕಾಯ್ದಿಡುತ್ತಿದ್ದು, ಅವನ ಮಾತನ್ನು ಸಹ ಸುಳ್ಳಾಗಿಸುತ್ತಿತ್ತು. ಹಾಂ, ಇಂದು ನಾನು ಆ ಕ್ಷಣದ ನನ್ನ ಯೋಚನೆಯನ್ನು ನನ್ನ 'ಜಂಭ' ಎಂದೇ ಹೇಳುತ್ತೇನೆ. ಆ ಕ್ಷಣ ನಾನು ನನ್ನೊಳಗಿನ ಸತ್ಯವನ್ನು ಒಪ್ಪಿಕೊಳ್ಳಲಿಲ್ಲ, ರಿತಿಕ್‌ನ ನಿಜಾಂಶವನ್ನು ಸಹ ಒಪ್ಪಲಿಲ್ಲ. ಒಂದು ವೇಳೆ ಆಗ ನಾನು ಧೈರ್ಯವನ್ನು ಕಳೆದುಕೊಳ್ಳದಿದ್ದರೆ, ಇಂದು ಘಟಿಸಿದ್ದು ಅಂದೇ ಘಟಿಸಿ, ಎಂದೋ ಮುಗಿದು ಹೋಗುತ್ತಿತ್ತು.

'ನಾನು ನಿಮ್ಮನ್ನು ವಿವಾಹವಾಗುತ್ತೇನೆ, ನಿಮ್ಮಿಂದ ಮಕ್ಕಳನ್ನು ಹೆರಲು ಬಯಸುತ್ತೇನೆ ಎಂದು ಯಾರು ಹೇಳಿದ್ದು? ನಾನು ನಿಮ್ಮನ್ನು ಇಷ್ಟಪಡುತ್ತೇನೆ ಅಷ್ಟೆ. ಆದ್ದರಿಂದ ನಿಮ್ಮ ಜೊತೆಯನ್ನು ಬಯಸುತ್ತೇನೆ' ಎಂದಿದ್ದೆ.

'ಮತ್ತೆ ಇಷ್ಟವೇ? ಪ್ರೀತಿ ಅಲ್ವಾ?'

'ಹೌದೌದು, ಅದೇ ಪ್ರೀತಿ, ನಾನು ನಿಮ್ಮನ್ನು ಪ್ರೀತಿಸುತ್ತೇನೆ.'

'ಮದುವೆಯಾಗದೆ ನನ್ನೊಂದಿಗಿರುವಿರಿ? ಲಿವ್ ಇನ್ ರಿಲೇಶನ್?' ರಿತಿಕ್ ಚಾಲೆಂಜ್ ರೀತಿಯಲ್ಲಿ ಕೇಳಿದ್ದ. ನಾನು ರಿತಿಕ್‌ನ ಬಲೆಯಲ್ಲಿ ಸಿಲುಕಿದ್ದೆ. ಏಕೆಂದರೆ ನಾನು ನನ್ನ ಜೀವನದಲ್ಲಿ ನನ್ನದೇ ಆದ ರೀತಿಯಲ್ಲಿ ಬದುಕಲು ಬಯಸುತ್ತಿದ್ದೆ. 'ಲಿವ್ ಇನ್ ರಿಲೇಶನ್' ಎಂಬ ಬಲೆ ನನ್ನ 'ರೀತಿ' ಯಂತೆಯೇ ಇತ್ತು. ವಿವಾಹವಾಗದೆ ಪುರುಷನೊಂದಿಗೆ ಗಂಡಹೆಂಡತಿಯಂತೆ ಇರುವ ಕಲ್ಪನೆ ನನ್ನನ್ನು ರೋಮಾಂಚನಗೊಳಿಸಿತ್ತು. ಇದರಲ್ಲಿ ನನ್ನ ಸ್ವಾತಂತ್ರ್ಯ ಕಾಣಬಂತು. ನನಗೆ ಬೇಕೆನಿಸಿದಾಗ ನಾನು ಮುಕ್ತಳಾಗಬಹುದಿತ್ತು, ವಾಸ್ತವವಾಗಿ ನಾನು ಮುಕ್ತಳಾಗಿಯೇ ಇರಬೇಕಿತ್ತು; ನಿಯಮವೊಂದನ್ನು